## ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಕೆ.ಆರ್.ನಗರ

**Crl.Misc No.162/2019**
**RW : 1**

**ದಿನಾಂಕಃ 28-06-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| **ಸಾಕ್ಷಿಯ ಹೆಸರುಃ** | **ಚಿದಾನಂದ** |
| **ತಂದೆಯ ಹೆಸರುಃ** | **ನಂಜಪ್ಪ** |
| **ವಯಸ್ಸುಃ** | **37 ವರ್ಷ** |
| **ಉದ್ಯೋಗಃ** | **ಕೂಲಿ ಕೆಲಸ** |
| **ವಾಸ ಸ್ಥಳಃ** | **ನರಚನಹಳ್ಳಿ** |

**ಮುಖ್ಯ ವಿಚಾರಣೆ ಎದುರುದಾರರ ಪರವಾಗಿಃ ಶ್ರೀ ಟಿ.ಜಿ ವಕೀಲರಿಂದಃ**

1. 1 ನೇ ಅರ್ಜಿದಾರಳು ನನ್ನ ಹೆಂಡತಿ ಮತ್ತು 2 ನೇ ಅರ್ಜಿದಾರ ನನ್ನ ಮಗ. 2016 ರಲ್ಲಿ ನನ್ನ ಮತ್ತು 1 ನೇ ಅರ್ಜಿದಾರರ ವಿವಾಹವಾಗಿರುತ್ತದೆ. ನಮ್ಮ ವಿವಾಹದ ಖರ್ಚನ್ನು ಇಬ್ಬರ ಕುಟುಂಸ್ಥರು ಸಹ ಸೇರಿ ಮಾಡಿರುತ್ತೇವೆ. ಮದುವೆ ಆದ ನಂತರದಲ್ಲಿ 1 ನೇ ಅರ್ಜಿದಾರಳು "ನಿನ್ನನ್ನು ಕಂಡರೆ ನನಗೆ ಇಷ್ಟ ಇಲ್ಲ. ನನ್ನ ಮನೆಯವರು ಬಲವಂತಕ್ಕೆ ನಾನು ನಿನ್ನನ್ನು ವಿವಾಹವಾಗಿರುತ್ತೇನೆ. ನಾನು ಬೇರೆ ಹುಡುಗನನ್ನು ಇಷ್ಟ ಪಡುತ್ತಿದ್ದೇನೆ" ಎಂದು 1 ನೇ ಅರ್ಜಿದಾರಳು ನನ್ನೊಂದಿಗೆ ಜಗಳ ಮಾಡುತ್ತಿದ್ದಳು. 1 ನೇ ಅರ್ಜಿದಾರಳು ತಾನು ಪ್ರೀತಿಸುವ ಹುಡಗನೊಂದಿಗೆ ಬೆಂಗಳೂರಿಗೆ ಹೋಗಿ ಅಲ್ಲಿಯೇ ಕೆಲಸ ಮಾಡುತ್ತಿದ್ದಾರೆ. ಮದುವೆ ಆದಾಗಿನಿಂದ 1 ನೇ ಅರ್ಜಿದಾರಳು ನನ್ನೊಂದಿಗೆ ಮತ್ತು ನನ್ನ ಕುಟುಂಬದವರಿಗೆ ವಿನಾಕಾರಣ ಜಗಳ ಮಾಡುತ್ತಿದ್ದಳು ಮತ್ತು ನಮ್ಮನ್ನು 1 ನೇ ಅರ್ಜಿದಾರಳು ನೋಡಿಕೊಂಡಿರುವುದಿಲ್ಲ. ನನಗೆ ಕೀಳುಗಳ ದೌರ್ಬಲ್ಯವಿದ್ದು, ನೀನು ಅನಾರೋಗ್ಯಸ್ಥ ಎಂದು 1 ನೇ ಅರ್ಜಿದಾರಳು ನನ್ನನ್ನು

ದೂರ ಮಾಡುತ್ತಿದ್ದಳು. 1 ನೇ ಅರ್ಜಿದಾರಳು ಬೆಂಗಳೂರಿನ ಕಂಪನಿಯೊಂದರಲ್ಲಿ ಒಳ್ಳೆಯ ಉದ್ಯೋಗದಲ್ಲಿದ್ದಾರೆ. ನನಗೆ ಯಾವುದೇ ಆಸ್ತಿ ಇಲ್ಲ. ನಾನು ಕೆಲಸ ಮಾಡಿ ನನ್ನ ವಯಸ್ಸಾದ ತಂದೆ ತಾಯಿಯನ್ನು ನೋಡಿಕೊಳ್ಳುವ ಜವಾಬ್ದಾರಿ ಇದೆ. 1 ನೇ ಅರ್ಜಿದಾರಳ ತಂದೆ, ತಾಯಿ, ಚಿಕ್ಕಪ್ಪ, ಮಾವ ಮತ್ತು ಅವರ ಇತರ ಕುಟುಂಬಸ್ಥರು ಒಟ್ಟು 7 ಜನ ಬಂದು ನನಗೆ ಹಲ್ಲೆ ಮಾಡಿರುತ್ತಾರೆ. ಅದರ ಸಂಬಂಧ ನಾನು ಸಾಲಿಗ್ರಾಮ ಪೋಲಿಸ್ ಠಾಣೆಯಲ್ಲಿ ದೂರನ್ನು ಸಹ ದಾಖಲಿಸಿರುತ್ತೇನೆ. ನನಗೆ ಅನ್ಯಾಯವಾಗಿದ್ದು, ನ್ಯಾಯ ಕೊಡಿಸಬೇಕು ಎಂದು ಪ್ರಾರ್ಥನೆ. ಆದ್ದರಿಂದ ಈ ಅರ್ಜಿಯನ್ನು ವಜಾಗೊಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

**ಎದುರುದಾರರ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ**
**ನ್ಯಾಯಾಧೀಶರು ಕೆ.ಆರ್.ನಗರ**